

# ಚಾಕಲೇಟ್ ಕಾರಂಜಿ



ಸಾಮಾನ್ಯವಾಗಿ ಕಾರಂಜಿ ಎಂದೊಡನೆ ನೆನಪಾಗುವುದು ಚಿಮ್ಮುವ ನೀರ ಕಾರಂಜಿ. ಆದರೆ ಇಲ್ಲಿ ಕಾಣುತ್ತಿರುವುದು ಅಪರೂಪವೆನಿಸುವ ಚಾಕಲೇಟ್ ಕಾರಂಜಿ. ಬರೋಬ್ಬರಿ 27 ಅಡಿ ಇರುವ ಇದು ಪ್ರಪಂಚದಲ್ಲೇ ಅತಿ ದೊಡ್ಡದಾದ ಹಾಗೂ ಎತ್ತರದ ಚಾಕಲೇಟ್ ಕಾರಂಜಿ. ಇದರಲ್ಲಿನ 6 ಪಂಪ್‌ಗಳು ಸುಮಾರು 2 ಟನ್‌ಗಳಷ್ಟು ಚಾಕಲೇಟ್ ರಸವನ್ನು ಎಡಬಿಡದೆ ಪ್ರಸರಣ ಮಾಡುತ್ತಿರುತ್ತವೆ.

ಹಾಲಿನ, ಗಾಢ ವರ್ಣದ ಹಾಗೂ ಬಿಳಿ ಬಣ್ಣದ ಚಾಕಲೇಟ್ ರಸವು, ಕೈಯಿಂದ ತಯಾರಿಸಿದ ವಿಶೇಷವಾದ ಗಾಜಿನ ಬಟ್ಟಲುಗಳಿಂದ ಧಾರೆ ಧಾರೆಯಾಗಿ ಸುರಿವ ಪರಿಯಂತೂ ಅಚ್ಚರಿ ಉಂಟು ಮಾಡುತ್ತದೆ. ಈ ಕಾರಂಜಿ ಇರುವುದು ಅಮೆರಿಕಾದ ಲಾಸ್ ವೇಗಾಸ್ ಬಳಿಯ ಬೆಲ್ಲಾಜಿಯೊ ಎಂಬಲ್ಲಿ. ಸಿಡಿಯುವ ತುಂತುರು ಸಿಹಿ ಹನಿಯನ್ನಾದರೂ ಸವಿಯೋಣವೆಂದು ಚಾಕಲೇಟ್ ಪ್ರಿಯರು ಈ ಕಾರಂಜಿ ಬಳಿ ಹೋಗುವಂತಿಲ್ಲ. ಯಾಕೆಂದರೆ ಇಡೀ ಕಾರಂಜಿಯನ್ನು ಲಾಳಿಕೆ ಆಕಾರದ ಗಾಜಿನ ಗೋಡೆಯಿಂದ ಬಂದೋಬಸ್ತ್ ಮಾಡಲಾಗಿದೆ.

■ ವಿದ್ಯಾ ಹಾಲಭಾವಿ